ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದೀಪಾಂಜಲಿನಗರ, ವಾರ್ಡ್ ಸಂಖ್ಯೆ-158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ,
(ಅಭಯ ಆಂಜನೇಯ ದೇವಸ್ಥಾನ ಹತ್ತಿರ) ಬೆಂಗಳೂರು-560 026

ಸಂಖ್ಯೆ: ಸ.ಕಾ.ನಿ.ಅ/ಗಾಅ/ಪಿಆರ್/ /22-23 ದಿನಾಂಕ:-07-05-2022

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀ. ಜಯಶಂಕರ್ | ನೋಡೆಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀಮತಿ. ಚೈತ್ರ .ಜಿ.ಎಸ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ಹೆಚ್. ಮಂಜುನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 4 | ಶ್ರೀಮತಿ. ಉಷಾ .ಸಿ.ಆರ್. | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |
| 5 | ಶ್ರೀ. ಹೆಚ್.ಕೆ. ಕೃಷ್ಣಪ್ಪ | ಬಿ.ಡಬ್ಲ್ಯೂ.ಎಸ್.ಎಸ್.ಬಿ. | ಹಾಜರಾಗಿರುತ್ತಾರೆ |

**ಸಭೆಗೆ ಹಾಜರಿದ್ದ ಸಾರ್ವಜನಿಕರು**

1. ಶ್ರೀ. ರಾಜು
2. ಶ್ರೀಮತಿ. ಗಿರಿಜಮ್ಮ
3. ಶ್ರೀಮತಿ. ರಾಜೇಶ್ವರಿ
4. ಶ್ರೀ. ನಂಜುಂಡಯ್ಯ .ಎನ್.
5. ಶ್ರೀ. ಎಂ. ವೆಂಕಟೇಶಪ್ಪ
6. ಶ್ರೀ. ಕುಮಾರ್ .ಎಸ್.
7. ಶ್ರೀ. ಎಲ್. ಕೃಷ್ಣಪ್ಪ
8. ಶ್ರೀಮತಿ. ವತ್ಸಲ .ಪಿ.
9. ಶ್ರೀಮತಿ. ಜಯಮ್ಮ
10. ಶ್ರೀ. ಮಂಜುನಾಥ .ಜೆ.

ಸಮಿತಿಯ ಕಾರ್ಯದರ್ಶಿಯವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರುಗಳಿಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿದ ನಂತರ ಸಭೆಯನ್ನು ಆರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

5ನೇ ಅಡ್ಡರಸ್ತೆ, ವಿನೋಭ ಕಾಲೋನಿಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆಯವರು ಮ್ಯಾನ್ ಹೋಲ್‌ನಿಂದ ತೆಗೆದಿರುವ ಹೂಳನ್ನು ಹಾಗೆ ರಸ್ತೆಯಲ್ಲಿ ಬಿಟ್ಟಿರುವುದಾಗಿ ಅದನ್ನು ತೆಗೆಯಬೇಕೆಂದು ಸ್ಥಳೀಯ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಉಷಾ, ಸಹಾಯಕ ಅಭಿಯಂತರವರು ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ : ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇಲಾಖೆ**

ರಂಗನಾಥ ಕಾಲೋನಿಯಲ್ಲಿ ಗಿಡಗಳು ಬೆಳೆದಿರುವುದರಿಂದ ಸೊಳ್ಳೆಗಳು ಹೆಚ್ಚಾಗಿದ್ದು ಆದುದರಿಂದ ಸೊಳ್ಳೆ ಔಷಧಿಯನ್ನು ಸಿಂಪಡಿಸಬೇಕಾಗಿ ಶ್ರೀ. ರಾಜು ರವರು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಘನತ್ಯಾಜ್ಯ ನಿರ್ವಹಣೆ ಕೊಶ**

ವಿನೋಭ ಕಾಲೋನಿ 3 ಮತ್ತು 4ನೇ ಅಡ್ಡರಸ್ತೆಗೆ ಡಾಂಬರೀಕರಣಗೊಳಿಸುವಂತೆ ಸಾರ್ವಜನಿಕರು ಕೋರಿದರು, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿ.ಡಿ.ಎ. ಬಡಾವಣೆಯಲ್ಲಿ ಕೊಳವೆ ಭಾವಿ ಇದ್ದು ಅದರಲ್ಲಿ ನೀರು ಇದೆಯೇ ಇಲ್ಲವೇ ಎಂದು ಪರೀಕ್ಷಿಸಬೇಕೆಂದು ಸಾರ್ವಜನಿಕರು ಕೋರಿದರು. ರಂಗನಾಥ ಕಾಲೋನಿಯಲ್ಲಿ ಚರಂಡಿ ಕಾಮಗಾರಿ ಮುಗಿದ ಮೇಲೆ ಡಾಂಬರೀಕರಣ ಮಾಡಲು ಸಹ ತಿಳಿಸಿದರು, ವಿನೋಭ ಕಾಲೋನಿ ಸಮುದಾಯ ಭವನದ ಮುಖ್ಯರಸ್ತೆಯಲ್ಲಿ ಮನೆ ಅಡ್ಡ ಇದ್ದು 50 ಅಡಿ ರಸ್ತೆಗೆ ನೇರವಾಗಿ ರಸ್ತೆಯನ್ನು ಮಾಡುವಂತೆ ಸಾರ್ವಜನಿಕರು ತಿಳಿಸಿದರು, ವೀರಭದ್ರನಗರ ಮುಖ್ಯರಸ್ತೆಯಲ್ಲಿ ಚರಡಿಯಿಂದ ಹೂಳನ್ನು ತೆಗೆಯುವಂತೆ ತಿಳಿಸಿದರು ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಕಾಮಗಾರಿ ಇಲಾಖೆ**

ವಿನೋಭ ಕಾಲೋನಿಯಲ್ಲಿ ರಾತ್ರಿ ಸಮಯದಲ್ಲಿ ಕಿಡಿಗೇಡಿಗಳು ಅನೈತಿಕ ಚಟುವಟಿಕೆಯನ್ನು ಮಾಡುತ್ತಿರುವುದಾಗಿ ಸ್ಥಳೀಯ ಸಾರ್ವಜನಿಕರು ತಿಳಿಸಿ ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳು ಸದರಿ ಸ್ಥಳಕ್ಕೆ ಭೇಟಿ ನೀಡುವಂತೆ ತಿಳಿಸಿದರು, ಸಂಬಂಧಪಟ್ಟ ಪೊಲೀಸ್ ರವರಿಗೆ ಕ್ರಮವನ್ನು ಕೈಗೊಳ್ಳಲು ತಿಳಿಸಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಪೊಲೀಸ್ ಇಲಾಖೆ**

ಶ್ರೀಮತಿ ಜಯಮ್ಮ, ನಂ.425, 9ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆಯಲ್ಲಿ ಮನೆಯ ಹತ್ತಿರ ಮರವು ಬಾಗಿದ್ದು ಮನೆಯ ಮೇಲೆ ಬೀಳುವ ಸಂಭವವಿರುವುದರಿಂದ ಹಾಗೂ ಮಳೆಗಾಲವು ಪ್ರಾರಂಭವಾಗಿರುವುದರಿಂಧ ರಸ್ತೆಯಲ್ಲಿ ಸಂಚರಿಸುವ ವಾಹನಗಳಿಗೆ ಜನರಿಗೆ ತೊಂದರೆಯಾಗದಂತೆ ಅತಿ ಜರೂರಾಗಿ ಮರವನ್ನು ತೆರವುಗೊಳಿಸುವಂತೆ ಮತ್ತು 5ನೇ ಅಡ್ಡರಸ್ತೆ ಕಸ್ತೂರಿಬಾ ಕಾಲೋನಿಯಲ್ಲಿ ಮರವನ್ನು ತೆರವುಗೊಳಿಸುವಂತೆ ಸಹ ಕೋರಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಮರವನ್ನು ತೆರವುಗೊಳಿಸುವಂತೆ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀಮತಿ. ಚೈತ್ರ .ಜಿ.ಎಸ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 158 (ಗಾಳಿ ಆಂಜನೇಯ ಸ್ವಾಮಿ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.